ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹಾನಗಲ್

ಸಿ. ಸಿ. ನಂ.**801/2024**

| | | | | |
|---|---|---|---|---|
| ಸಾಕ್ಷಿಧಾರರ ಹೆಸರು | : | ರೇಣುಕಾ ಈರಕ್ಕನವರ | ಪಿಡಬ್ಲ್ಯೂ | **4** |
| ತಂದೆ/ಗಂಡನ ಹೆಸರು | : | ನಾರಾಯಣ | ಸಿಡಬ್ಲ್ಯೂ | **4** |
| ವಯಸ್ಸು | : | 60 ವರ್ಷ | | |
| ಉದ್ಯೋಗ | : | ನಿವೃತ್ತಿ ಅಂಗನವಾಡಿ ಶಿಕ್ಷಕಿ | | |
| ವಾಸಸ್ಥಳ | : | ಮಂತಗಿ | | |

ದಿನಾಂಕ **13.02.2025** ರಂದು ಸಾಕ್ಷಿಧಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ: ಸಹಾಯಕ ಸರಕಾರಿ ಅಭಿಯೋಜಕರಿಂದ

ಹಾನಗಲ್ ನಗರದಲ್ಲಿ ನಾನು ಅಂಗನವಾಡಿ ಶಿಕ್ಷಕಿಯಾಗಿ ಕಾರ್ಯ ನಿರ್ವಹಿಸುತ್ತಿದ್ದೆ. ನಾನು ಮಂತಗಿಯಿಂದ ಪ್ರತಿನಿತ್ಯ ಬಸ್ ನಲ್ಲಿ ಬರುತ್ತಿದ್ದೆ.

ದಿ: 10.07.2023 ರಂದು ಬೆಳಿಗ್ಗೆ 8.30 ಕ್ಕೆ ಮಂತಗಿಯಿಂದ ಬಸ್ ಹತ್ತಿದೆ. ಹಾನಗಲ್ ಗಗೆ ಅದು 9.30 ಕ್ಕೆ ಬಸ್ ಬಂದಿತ್ತು. ನಾನು ಹಳೆ ಬಸ್ ನಿಲ್ದಾಣಕ್ಕೆ ಇಳಿದು ಎಡಗಡೆಯಿಂದ ಹೊರಟಿದ್ದೆ. ಬಸ್ ಎದ್ವಾ ತದ್ವಾ ಹೊಡೆದುಕೊಂಡು ಬಂದು ನನಗೆ ತಾಕಿತು. ನಾನು ಆಗ ಬಿದ್ದೆ. ಬಸ್ ನ ಗಾಲಿ ನನ್ನ ಕಾಲಿನ ಮೇಲೆ ಹತ್ತಿತು. ನನ್ನ ಕಾಲು ಸಂಪೂರ್ಣ ಮುರಿಯಿತು. ಅಲ್ಲಿ ಜನ ಸೇರಿದರು. ನನ್ನನ್ನು ಪುಟಬಾತನಲ್ಲಿ ಹಾಕಿ ಆ್ಯಂಬುಲೆನ್ಸ ಗೆ ಪೋನ್ ಮಾಡಿದರು. ಚಾಸಾ-5, 7 ಇದ್ದರು, ಜಗದೀಶ ಅವರು ನನ್ನ ಮಗನಿಗೆ ವಿಷಯ ತಿಳಿಸಿದರು. ಬಸ್ ಚಾಲಕನನ್ನು ಕರೆದು ವಿಚಾರಿಸಿದರು. ಆತ ತನ್ನ ಹೆಸರನ್ನು ಪರಸಪ್ಪ ವಾಲೀಕಾರ ಅಂತಾ ಹೇಳಿದನು. ಹಾನಗಲ್ ಸರಕಾರಿ ಆಸ್ಪತ್ರೆಗೆ ಕಳುಹಿಸಿಕೊಟ್ಟರು. ಅಲ್ಲಿ ನನ್ನ ಮಗ ಚಾಸಾ-1 ಮತ್ತು ನನ್ನ ಗಂಡ ಬಂದರು. ಅಲ್ಲಿಂದ ನನ್ನನ್ನು ಆ್ಯಂಬುಲೆನ್ಸ ನಲ್ಲಿ ಶಿರಸಿ ಗೆ ಕರೆದುಕೊಂಡು ಹೋದರು. ಶಿರಸಿ ಆಸ್ಪತ್ರೆಯವರು ಮಂಗಳೂರು ಹೆಗಡೆ ಆಸ್ಪತ್ರೆಗೆ ಕಳುಹಿಸಿಕೊಟ್ಟರು. ಮಾರನೇ ದಿನ ನನ್ನ ಮಗ ಚಾಸಾ-1 ರವರು ದೂರು ಸಲ್ಲಿಸಿರುತ್ತಾನೆ. ಬಸ್ ನಂ. ಕೆಎ-27 ಎಫ್ 509 ಇತ್ತು. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿ ನೋಡಿ ಗುರುತಿಸುತ್ತಾರೆ. ಬಸ್ ನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು

ಪೋಟೋದಲ್ಲಿ ಬಸ್ ನ್ನು ನೋಡಿ ಗುರುತಿಸುತ್ತಾರೆ. ಪೋಟೋವನ್ನು ನಿಪಿ-2 ಎಂದು ಈಗಾಗಲೇ ಗುರುತಿಸಲಾಗಿದೆ.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸ್ ಎಂ ಕೆ ವಕೀಲರಿಂದಃ</u>

ಬೆಳಗಿನ ಬಸ್ ಅದೊಂದೆ ಬಸ್ ಎಂದರೆ ಸರಿ. ಆ ಬಸ್ ಗೆ ಎಲ್ಲಾ ಶಾಲಾ ಮಕ್ಕಳು ಮತ್ತು ಸಾರ್ವಜನಿಕರು ಬರುತ್ತಾರೆ ಎಂದರೆ ಸರಿ. ಬೆಳಗಿನ ಬಸ್ ಫುಲ್ ಆಗಿ ಬಂದಿತ್ತು ಎಂದರೆ ಸರಿ. ಶಕ್ತಿಯೋಜನೆ ಅಡಿ ಮಹಿಳೆಯರು ಜಾಸ್ತಿ ಓಡಾಡುತ್ತಿದ್ದಾರೆ ಎಂದರೆ ಸರಿ. ಸದರಿ ಬಸ್ ಹಾನಗಲ್ ಬಸ್ ನಿಲ್ದಾಣಕ್ಕೆ ಬಂದು ನಿಂತಿತ್ತು ಎಂದರೆ ಸರಿ. ಅಲ್ಲಿ ಜನ ಇಳಿದಿದ್ದರು ಎಂದರೆ ಸರಿ. ಬಸ್ ನಿಲ್ದಾಣದ ಪಕ್ಕಕ್ಕೆ ಪುರಸಭೆ ಕಚೇರಿ ಇದೆ ಎಂದರೆ ಸರಿ. ಎಡಗಡೆಗೆ ಗ್ರಾಮದೇವತೆ ಪಾದಗಟ್ಟಿ ಇದೆ ಎಂದರೆ ಸರಿ. ರಸ್ತೆ ಎರಡು ಬದಿಯಲ್ಲಿ ಅಂಗಡಿಗಳು ಇವೆ ಎಂದರೆ ಸರಿ. ಸದರಿ ಸ್ಥಳವು ಸಾಕಷ್ಟು ಜನ ಓಡಾಡುವ ಸ್ಥಳ ಎಂದರೆ ಸರಿ. ನಾನು ನನ್ನ ಕೆಲಸದ ಆತುರಕ್ಕೆ ಜನ ದಟ್ಟಣೆಯಲ್ಲಿ ಆತುರಾತುರದಿಂದ ಇಳಿದಿದ್ದೆ ಎಂದರೆ ಸರಿ. ಬಸ್ ನ ಕೆಳಗೂ ಸಾಕಷ್ಟು ಜನ ಇದ್ದರೂ ಎಂದರೆ ಸರಿಯಲ್ಲ. ಆ ದಿನ ಮಳೆಯಾಗಿತ್ತು ಎಂದರೆ ಸರಿಯಲ್ಲ. ಆಗ ಮಳೆಗಾಲ ಇತ್ತು ಎಂದರೆ ಸರಿ. ಆ ದಿನ ಮಳೆಯಾಗಿರಲಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಬಸ್ ಯಾವ ದಿಕ್ಕಿಗೆ ಮುಖ ಮಾಡಿ ನಿಂತಿತ್ತು ಹೇಳಲು ಬರುವುದಿಲ್ಲ. ಬಸ್ ನಿಂದ ಅವಸರದಿಂದ ಇಳಿಯುವಾಗ ರಶ್ ಇದ್ದುದ್ದರಿಂದ ನಾನೇ ಬಿದ್ದು ಆಗ ನನ್ನ ಚಪ್ಪಲಿ ಬಸ್ ನ ಕೆಳಗಡೆ ಹೋದಾಗ ಕಾಲಿನಿಂದ ತೆಗೆಯಲು ಹೋದಾಗ ಅಪಘಾತವಾಗಿತ್ತು ಎಂದರೆ ಸರಿಯಲ್ಲ. ನಾನೇ ಬಸ್ ಇಳಿಯುವಾಗ ಬಿದ್ದು ಗಾಯಗೊಂಡಿದ್ದೇನೆ ಎಂದರೆ ಸರಿಯಲ್ಲ. ಬಸ್ ಗೂ ನನಗೂ 7-8 ಪೂಟು ಅಂತರ ಇತ್ತು. ಬಸ್ ನಿಲ್ದಾಣದ ಹತ್ತಿರ ಬಸ್ ನ್ನು ವೇಗವಾಗಿ ಚಲಾಯಿಸಲು ಬರುವುದಿಲ್ಲ, 2-3 ಕಿ.ಮೀ ಅಂತರ ಹೋದ ಮೇಲೆ ಗೇರ್ ಹಾಕಿದ ಮೇಲೆ ವೇಗವಾಗಿ ಹೋಗುತ್ತದೆ ಎಂದರೆ ನಾನು ವೇಗವನ್ನು ನೋಡಿಲ್ಲ ಎಂದು ನುಡಿಯುತ್ತಾರೆ. ಬಸ್ ನಿಂತಿತ್ತು ಅದು ಚಾಲನೆಯಲ್ಲಿರಲಿಲ್ಲ ಎಂದರೆ ಸರಿಯಲ್ಲ.

ಬಸ್ ನ ಬಣ್ಣ ಹಸಿರು ಇತ್ತು. ನನಗೆ ಈಗ 60 ವರ್ಷ. ವಯೋವೃದ್ಧೆ ಖಾಯಿಲೆಯಾದ ಬಿಪಿ ಸುಗರ್ ಇದೆ ಎಂದರೆ ಸರಿಯಲ್ಲ. ನನಗೆ ವಯಸ್ಸಾಗಿ ಆರೋಗ್ಯ ಸರಿ ಇಲ್ಲದೆ ಜೋಲಿ ಹೋಗುತ್ತಿತ್ತು ಎಂದರೆ ಸರಿಯಲ್ಲ. ಬಸ್ ಚಾಲಕನ ತಪ್ಪಿನಿಂದ ಯಾವುದೇ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ. 60 ವರ್ಷ ಆಗಿದ್ದರಿಂದ ಕಣ್ಣಿನ ದೃಷ್ಟಿ ಸರಿ ಇಲ್ಲ ಎಂದರೆ ಸರಿಯಲ್ಲ. ನಾನು ವಯೋವೃದ್ಧೆ ಖಾಯಿಲೆಯಿಂದ ನನ್ನ ತಪ್ಪಿನಿಂದ ಬಿದ್ದು ಗಾಯಗೊಂಡಿದ್ದೇನೆ ಎಂದರೆ ಸರಿಯಲ್ಲ. ಪರಿಹಾರಕ್ಕೋಸ್ಕರ ಆರೋಪಿ ಮೇಲೆ ಸುಳ್ಳು ದೂರು ಸಲ್ಲಿಸಿದ್ದೇನೆ ಎಂದರೆ

ಸರಿಯಲ್ಲ. ಪೋಲಿಸರೊಂದಿಗಗೆ ಮೀಲಾಪಿಯಾಗಿ ಸುಳ್ಳು ದೂರು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**: ಮರುವಿಚಾರಣೆ : ಇಲ್ಲ.**

**(** ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**)**

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

**Sd/-**

ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್